OS No. 75/2018
PW-1

(ಇಂದು ದಿಃ 15-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

**ಪಾಟೀ ಸವಾಲು :- 3ನೇ ಪ್ರತಿವಾದಿ ಪರ ಶ್ರೀ.SRP ವಕೀಲರಿಂದ :-**

ನಾನು ಅವಿದ್ಯಾವಂತೆ. ನಾನು ಹೆಬ್ಬೆಟ್ಟಿನ ಗುರುತು ಹಾಕುತ್ತೇನೆ. ನನ್ನ ತಂದೆಯ ತಾಯಿ ದೇವಮ್ಮ. ದೆವಮ್ಮಳ ತಂದೆ ದೊಡ್ಡಪ್ಪ ಎಂದರೆ ಸರಿ. ದಾವಾ ಜಮೀನುಗಳು ದೊಡಪ್ಪನಿಂದ ದೇವಮ್ಮಳಿಗೆ ಬಂದ ಜಮೀನುಗಳು ಎಂದರೆ ಸರಿ. ದಾವಾ ಸ್ವತ್ತುಗಳು ದೇವಮ್ಮಳ ತವರು ಮನೆ ಸ್ವತ್ತುಗಳು ಎಂದರೆ ಸರಿ. ದೊಡ್ಡಪ್ಪ ತೀರಿಹೋದ ನಂತರ ಅವನ ಹೆಸರಿನಲ್ಲಿದ್ದ ಆಸ್ತಿಗಳನ್ನು ದೇವಮ್ಮ ಮುಟೇಷನ ಮಾಡಿಕೊಂಡಳು ಎಂದರೆ ಸರಿ. ಮುಟೇಷನ ಮಾಡಿಸಿಕೊಂಡ ನಂತರ ದೇವಮ್ಮ ಕೇಲವು ಜನರಿಗೆ ಜಮೀನು ಮಾರಾಟ ಮಾಡಿದರು ಎಂದರೆ ಸರಿ. 3ನೇ ಪ್ರತಿವಾದಿಗೂ ಕೂಡ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸರಿ. ದೇವಮ್ಮ 3ನೇ ಪ್ರತಿವಾದಿಗೆ ಜಮೀನು ಖರೀದಿ ಕೊಟ್ಟಾಗ ಜಮೀನಿನ ಕಬ್ಜಾವನ್ನು 3ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಳು ಎಂದರೆ ಸರಿ. ಅಂದಿನಿಂದ ಇಲ್ಲಿಯವರೆಗೆ 3ನೇ ಪ್ರತಿವಾದಿ ಸದರಿ ಜಮೀನಿನ ಕಬ್ಜದಾಲ್ಲಿದ್ದಾರೆ ಎಂದರೆ ಸರಿ. 3ನೇ ಪ್ರತಿವಾದಿ ಮಾಲಿಕರು ಎಂದರೆ ಸರಿ. ಅವರು ಬೆಳೆ ಸಾಲ ಪಡೆದುಕೊಳ್ಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ತಾವು ಖರೀದಿ ಮಾಡಿದ್ದ ಜಮೀನನ್ನು 3ನೇ ಪ್ರತಿವಾದಿ ಮತ್ತು ಅವರ ತಮ್ಮ ದೇವಪ್ಪ ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅವರಿಬ್ಬರು ವಿಭಾಗ ಮಾಡಿಕೊಂಡಿದ್ದು ಅದರಂತೆ ಮುಟೇಷನ ಆಗಿ ಪ್ರತ್ಯೇಕ ಪಹಣಿ ಬರುತ್ತಿವೆ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸುವ ಮುಂಚೆ 3ನೇ ಪ್ರತಿವಾದಿ ಹೆಸರಿಗೆ ಆದ ಮುಟೇಷನನ್ನು ನಾನು ಪ್ರಶ್ನೇ ಮಾಡಿಲ್ಲ. 3ನೇ ಪ್ರತಿವಾದಿ ಮತ್ತು ಅವರ ತಮ್ಮ ವಿಭಾಗ ಮಾಡಿಕೊಂಡ ನಂತರ 3ನೇ ಪ್ರತಿವಾದಿಗೆ 3ಎಕರೆ, 2 ಎಕರೆ ಜಮೀನು ಭಾಗಕ್ಕೆ ಬಂದಿದೆ ಎಂದರೆ ಸರಿಯಲ್ಲ. ಅದರಂತೆ ಅತನ ಹೆಸರಿಗೆ ಪಹಣಿ ಬುರುತ್ತಿದೆ ಎಂದರೆ ಸರಿಯಲ್ಲ. ಅವರು ವಿಭಾಗ ಆದ ಪ್ರಕಾರ 2015-16 ರಲ್ಲಿ ಮುಟೇಷನ ಆಗಿದೆ ಎಂದರೆ ನಮಗೆ ಗೊತ್ತಿಲ್ಲದೆ ಆಗಿದೆ ಎಂದು ಹೇಳುತ್ತಾರೆ. ಇತ್ತಿಚೇಗೆ ಸದರಿ ಮುಟೇಷನ ಬಗ್ಗೆ ಗೊತ್ತಾಗಿದೆ. ಈ ದಾವೆ ಸಲ್ಲಿಸುವಾಗ ಗೊತ್ತಾಯಿತು.

ದಾವಾ ಜಮೀನು ದೇವಮ್ಮಳ ತವರು ಮನೆ ಸ್ವತ್ತು ಆಗಿರುವ ಕಾರಣ ಅವಳೇ ದಾವಾ ಜಮೀನಿನ ಸಂಪೂರ್ಣ ಮಾಲಿಕಳು ಮತ್ತು ಕಬ್ಜಾದರಳು ಅಗಿದ್ದಳು ಮತ್ತು ಬೇರೆ ಯಾರಿಗೂ ಹಕ್ಕು ಮತ್ತು ಭಾಗ ಇರಲಿಲ್ಲ ಎಂದರೆ ಸರಿಯಲ್ಲ. ದೇವಮ್ಮ ಸಂಪೂರ್ಣ ಮಾಲಿಕರಾಗಿದ್ದು ಜಮೀನನ್ನು

3ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾ ಜಮೀನು ದ ದೇವಮ್ಮ ತವರು ಮನೆಯಿಂದ ಬಂದ ಜಮೀನು ಆಗಿರುವ ಕಾರಣ ನನಗೆ ಅದರಲ್ಲಿ ಭಾಗ ಕೇಳುವ ಮತ್ತು ಈ ದಾವೆ ಹಾಕುವ ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3ನೆ ಪ್ರತಿವಾದಿಗೆ ಜಮೀನು ಮಾರಾಟ ಮಾಡಿ ಕಬ್ಜಾ ಕೊಟ್ಟಿರುವ ಸಂಗತಿ ನನಗೆ ಗೊತ್ತಿದ್ದರೂ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**(5 ನೇ ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**